ಶಾಲೆಯನ್ನು ಪುನಃ ಆರಂಭಿಸಬೇಕೆಂದು ಇಲ್ಲದಿದ್ದಲ್ಲಿ ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಂ ವುದೆಂದು ತಿಳಿಸಿದರು. ಅವರ ಮನವಿಯಂತೆ ಪ್ರಾಥಮಿಕ ಶಿಕ್ಷಣದ ಸಚಿವರಾದ ಸೋಮಂಶೇಖರ್ ರವರಿಗೆ ನಾನೂ ಲಿಖಿತಮೂಲಕ ಮನವಿ ಮಾಡಿದ್ದೇನೆ. ಸಚಿವರು ತಕ್ಷಣ ಶಾಲೆಯನ್ನು ಪ್ರಾರಂಭಿಸು ವಂತೆ ಕ್ರಮ ಕೈಗೊಳ್ಳಲು ತುಮಕೂರು ಜಿಲ್ಲಾ ವಿದ್ಯಾಧಿಕಾರಿಗಳಿಗೆ ಆದೇಶ ಕೊಟ್ಟಿರುತ್ತಾರೆ. ಆದಾಗ್ಯೂ ಸಹ ಶಾಲೆ ಪ್ರಾರಂಭವಾಗಿರುವುದಿಲ್ಲ. ಈ ಗ್ರಾಮದ ಜನರು ತಿಪಟೂರು ತಾಲ್ಲೂಕು ಸಹಾಯಕ ಶಿಕ್ಷಣಾಧಿಕಾರಿಗಳಲ್ಲಿ ಹೋಗಿ ಕೇಳಲು, ಯಾರೇ ಹೇಳಿದರು ನಿಮ್ಮ ಊರಿಗೆ ನಾನು ಶಾಲೆಯನ್ನು ಕೊಡುವುದಿಲ್ಲ ಎಂದು ಹೇಳಿರುತ್ತಾರೆ. ಮಾನ್ಯ ಸಚಿವರು ತಾವೇ ಖುದ್ದಾಗಿ ಈ ಗ್ರಾಮಕ್ಕೆ ಭೇಟಿ ಕೊಟ್ಟು ಮಕ್ಕಳ ಸಂಖ್ಯೆಯನ್ನು ಗಮನಿಸಿ ತಕ್ಷಣ ಶಾಲೆಯನ್ನು ಪ್ರಾರಂಭಿಸಿ ತಮ್ಮ ಆದೇಶವನ್ನು ಕಡೆಗಣಿಸಿರುವ ಸಹಾಯಕ ಶಿಕ್ಷಣಾಧಿಕಾರಿಯವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರನ್ನು ಹೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಮಾನ್ಯ ಸಚಿವರು ಮೇಲ್ಮನೆಯಲ್ಲಿ ದ್ದಾರೆ. ಆದ್ದರಿಂದ, ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಿಸುವುದಕ್ಕೆ ಸೂಕ್ತವಾದ ಆದೇಶ ಕೊಡಲಿಕ್ಕೆ ತಿಳಿಸಿ ಆ ಮೂಲಕ ನಾನು ಏರ್ಪಾಡು ಮಾಡುತ್ತೇನೆ.

15 ಚಿಂಚೋಳಿ ತಾಲ್ಲೂಕಿನಲ್ಲಿ ಹಾಲಿನ ಕೇಂದ್ರವನ್ನು ತೆರೆಯುವುದು

ಶ್ರೀ ಎಂ. ವೀರಯ್ಯಸ್ವಾಮಿ.- ಸುಮಾರು ಐದಾರು ವರ್ಷಗಳ ಹಿಂದೆ ಚಿಂಚೋಳಿ ತಾಲ್ಲೂಕಿನಲ್ಲಿ ಹಾಲಿನ ಕೇಂದ್ರ ಪ್ರಾರಂಭಿಸುವ ಇಚ್ಛೆಯಿಂದ ಜಿಲ್ಲಾ ಗ್ರಾಮಿಣಾಭಿವೃದ್ಧಿ ಸಂಘದ ವತಿಯಿಂದ ಸುಲೇ ಪೇಟೆ ಗ್ರಾಮದಲ್ಲಿ ಶೀತಲೀಕರಣ ಯಂತ್ರವನ್ನು ಸ್ಥಾಪಿಸಲಾಯಿತು. ಪ್ರಾರಂಭದಿಂದಲೂ ಇಲ್ಲಿಯ ವರೆಗೆ ತಾಲ್ಲೂಕಿನ ಜನ ಹಾಲಿನ ಕೇಂದ್ರದ ನಿರೀಕ್ಷೆ ಮಾಡುತ್ತಲೇ ಇದ್ದಾರೆ. ಆದರೆ ಇನ್ನೂ ಹಾಲಿನ ಕೇಂದ್ರ ಪ್ರಾರಂಭವಾಗಿಲ್ಲ. ಸ್ಥಾಪಿಸಿರುವ ಶೀತಲೀಕರಣ ಯಂತ್ರ ಇದ್ದಲ್ಲಿಯೇ ತುಕ್ಕು ಹಿಡಿದು ಹೋಗುತ್ತಿದೆ. ಮಾನ್ಯ ಸಹಕಾರ ಮಂತ್ರಿಗಳು ಜಿಲ್ಲೆಯ ಹಾಲಿನ ಉತ್ಪಾದಕರ ಸಂಘಕ್ಕೆ ಕೂಡಲೇ ಹಾಲಿನ ಕೇಂದ್ರ ತೆಗೆಯುವುದರ ಜೊತೆಗೆ ತಾಲ್ಲೂಕಿನ ರೈತರಲ್ಲಿ ಹಾಲಿನ ಉತ್ಪಾದನಾ ಚಟುವಟಿಕೆಯನ್ನು ವೃದ್ಧಿಗೊಳಿಸಬೇಕಾಗಿ ಸೂಚನೆ ಕೊಡಬೇಕಾಗಿ ಹಾಗೂ ತುಕ್ಕು ಹಿಡಿಯುತ್ತಿರುವ ಶೀಥಲೀಕರಣ ಯಂತ್ರ ವನ್ನು ಉಪಯೋಗಕ್ಕೆ ತೆಗೆದುಕೊಳ್ಳಬೇಕಾಗಿ ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ವೈಕೆ. ರಾಮಯ್ಯ.—ಅಧ್ಯಕ್ಷರೆ, ಮಾನ್ಯ ಸಚಿವರಾದ ಸಿದ್ದರಾಮಯ್ಯನವರು ಇಲ್ಲಿ ಇಲ್ಲದೇ ಇರುವುದರಿಂದ, ಈ ಉತ್ತರವನ್ನು ಓದಲಿಕ್ಕೆ ತಮ್ಮ ಅಪ್ಪಣೆಯನ್ನು ಪಡೆದು ಓದಬೇಕಾಗಿದೆ.

ಅಧ್ಯಕ್ಷರೆ, ಸೂಲೇಪೇಟೆ ಗ್ರಾಮದಲ್ಲಿ ಶೀತಲೀಕರಣ ಕೇಂದ್ರವನ್ನು ಸ್ಥಾಪಿಸಲು ಬೇಕಾಗಿರುವ ಯಂತ್ರೋಪಕರಣಗಳನ್ನು ಜಿಲ್ಲಾ ಗ್ರಾಮೀಣಾ ಅಭಿವೃದ್ಧಿ ಸಂಘವು ಈ ಹಿಂದೆ ಪೂರೈಸಿದ್ದು ಅವನ್ನು ಅಲ್ಲಿನ ಹಾಲು ಉತ್ಪಾದಕರ ಸಹಕಾರಿ ಸಂಘದಲ್ಲಿ ಇಡಲಾಗಿದೆ. ನೀರಿನ ಅಭಾವ ಹಾಗೂ ಸಂಪರ್ಕ ತೊಂದರೆಯಿಂದಾಗಿ ಶೀಥಲೀಕರಣ ಕೇಂದ್ರವನ್ನು ಪ್ರಾರಂಭಿಸಲು ಸಾಧ್ಯವಾಗಲಿಲ್ಲ. ಅಲ್ಲಿ ಕೊಳವೆ ಬಾವಿಯನ್ನು ತೋಡಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಹಾಗೂ ಒಂದು ವೇಳೆನೀರು ಸಾಕಷ್ಟು ಪ್ರಮಾಣದಲ್ಲಿ ಸಿಗದ ಪಕ್ಷದಲ್ಲಿ ಆ ಶೀಥಲೀಕರಣ ಕೇಂದ್ರವನ್ನು ಬೇರೆಡೆಗೆ ಸ್ಥಾಪಿಸಬೇಕಾಗುತ್ತದೆ. ಅದಷ್ಟು ಬೇಗ ಕ್ರಮ ಜರುಗಿಸಲಾಗುವುದು.

೧೬ ಹುನಗುಂದ ತಾಲ್ಲೂಕಿನಲ್ಲಿ ರಾವ ಧಾಳ ನೀರಾವರಿ ಯೋಜನೆಯ ಪಂಪ್‌ಸೆಟ್ಟುಗಳ ರಿಪೇರಿ ಮತ್ತು ಕರ,ಭಾರವನ್ನು ಹಾಕದಂತೆ ಸೂಚಿಸುವುದು

ಶ್ರೀ ಎಸ್.ಜಿ. ಸಂಜಯ್ಯನವರ್ (ಗುಳೇದಗುಡ್ಡ) ಮಾನ್ಯ ಅಧ್ಯಕ್ಷರೆ ನನ್ನ ಕಂತಕ್ಷೇತ್ರದ ಹುನಗುಂದ ತಾಲ್ಲೂಕಿನ ರಾಮದಾಳ ಯಾತ ನೀರಾವರಿ ಯೋಜನೆಯಲ್ಲಿ ಐದು ಸುಪುಸೆಟ್ಟುಗಳು ಕೆಲವು ತಿಂಗಳ ಹಿಂದೆಯೇ ಕೆಟ್ಟು ಹೋಗಿ ಇನ್ನೂ ರಿಪೇರಿ ಆಗಿರುವುದಿಲ್ಲ. ಇದರಿಂದ ರೈತರಿಗೆ ತೊಂದರೆಯಾಗಿರುವುದಲ್ಲದೆ ಈ ಯೋಜನೆಯಿಂದ ನೀರಿನ ದೊರಕದ ಪರಿಸ್ಥಿತಿ ಇದ್ದಾಗೂ